ಅಶ್ವತ್ಥನಾರಾಯಣಗೌಡ
ಮಾಜಿ ಆಡಳಿತ ಪಕ್ಷದ ನಾಯಕರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Ashwathnarayanagowda
Ex. Ruling Party Leader
Bruhat Bangalore Mahanagara Palike

591/2015-16

Date:- 07/04/2015

ಮಾನ್ಯ ಜಂಟಿ ಆಯುಕ್ತರು,
ಯಲಹಂಕ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಾನ್ಯರೇ,

ವಿಷಯ:- 2014-15ನೇ ಸಾಲಿನ ಲೆಕ್ಕ ಶೀರ್ಷಿಕೆಯಲ್ಲಿ ಪಿ-1771 ರಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಯ ಸ್ಥಳದ ಬದಲಾವಣೆಯನ್ನು ಕೋರಿ

-*****-

ವಾರ್ಡ್ ಸಂಖ್ಯೆ:8 ರಲ್ಲಿ ತೆಗೆದು ಕೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳಲ್ಲಿ ಈ ಕೆಳಕಂಡ ಕಾಮಗಾರಿಯನ್ನು 2014-15ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ-1771 ರಲ್ಲಿ ತೆಗೆದುಕೊಳ್ಳಲಾಗಿರುತ್ತದೆ.

ಕಾಮಗಾರಿಯ ಹೆಸರು:-	:	Improvements to Roads and Drains (Poovaiah Residence) and providing CC Road at (Shivanda and Muniraju Residence) Maruthinagara Kodigehalli in Ward No.08
ಅಂದಾಜು ಮೊತ್ತ	:	ರೂ:10.00 ಲಕ್ಷಗಳು
ಕಾಮಗಾರಿಯ ಸಂಖ್ಯೆ	:	008-15-000024
ಕೆಲಸದ ಆದೇಶ ಸಂಖ್ಯೆ	:	EE/BTP/BBMP/E-TMP/315/2014-15, Date:23.02.2015
ಗುತ್ತಿಗೆದಾರರ ಹೆಸರು	:	ಶ್ರೀ.ಆರ್.ವಿಜಯಕುಮಾರ್

ಸದರಿ ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಉದ್ದೇಶಿತ ಟಾರ್ ಅಳವಡಿಸುವ ರಸ್ತೆಯಲ್ಲಿ ಸಾರ್ವಜನಿಕರು ಕಾಂಕ್ರೀಟ್ ಚರಂಡಿಯ ನಿರ್ಮಾಣದ ಹೊರತು ಟಾರನ್ನು ಅಳವಡಿಸದಂತೆ ಕೋರಿರುತ್ತಾರೆ ಹಾಗೂ ಉದ್ದೇಶಿತ ಕಾಂಕ್ರೀಟ್ ರಸ್ತೆಯ ಸ್ಥಳವು ಖಾಸಗಿ ಸ್ಥಳವಾದ ಕಾರಣ ಕೆಲಸದ ಆದೇಶದಲ್ಲಿ ನೀಡಿರುವ ಐಟಂಗಳ ಪ್ರಮಾಣವನ್ನು ಬದಲಿಸದೆ ಟಾರ್ ಅಳವಡಿಸುವುದನ್ನು ಕೊಡಿಗೇಹಳ್ಳಿಯ 6ನೇ ಅಡ್ಡರಸ್ತೆಯಲ್ಲಿ ತೆಗೆದುಕೊಳ್ಳಬಹುದಾಗಿದ್ದು ಹಾಗೂ ಕಾಂಕ್ರೀಟ್ ರಸ್ತೆಯ ಕಾಮಗಾರಿಯನ್ನು ಬಿ.ಬಿ.ನಗರದ ಅಡ್ಡರಸ್ತೆಗಳಲ್ಲಿ ಅಳವಡಿಸಬಹುದಾಗಿರುತ್ತದೆ. ರೂ.20.00 ಲಕ್ಷಗಳಿಗೆ ಮೀರದಂತೆ ಇರುವ ಕಾಮಗಾರಿಯ ಸ್ಥಳವನ್ನು ಹಾಗೂ ಯಾವುದೇ ಐಟಂಗಳ ಪ್ರಮಾಣದಲ್ಲಿ ವ್ಯತ್ಯಾಸವಿಲ್ಲದೆ ಬದಲಿ ಸ್ಥಳವನ್ನು ವಲಯದ ಮಾನ್ಯ ಜಂಟಿ ಆಯುಕ್ತರು ಅನುಮೋದನೆ ಮತ್ತು ಒಪ್ಪಿಗೆ ಸೂಚಿಸಬಹುದೆಂದು ಮಾನ್ಯ ಆಯುಕ್ತರು ಹೊರಡಿಸಿರುವ ಸುತ್ತೋಲೆಯಂತೆ ದಯಮಾಡಿ ಬದಲಿ ಸ್ಥಳಕ್ಕೆ ಈ ಪತ್ರದಲ್ಲಿ ಒಪ್ಪಿಗೆಯನ್ನು ಸೂಚಿಸುತ್ತಾ, ಕಮಗಾರಿಯನ್ನು ನಿರ್ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ಅಶ್ವಥನಾರಾಯಣ ಗೌಡ

ಕಛೇರಿ : ವಾರ್ಡ್ ನಂ.8, ಕಛೇರಿ ಕಾರ್ಯಲಯ, ಕೊಡಿಗೇಹಳ್ಳಿ ಮುಖ್ಯರಸ್ತೆ, ಸಹಕಾರನಗರ, ಬೆಂಗಳೂರು-560 092
ದೂರವಾಣಿ : 080 23628199, ಮೊಬೈಲ್ : 9448078232, E-mail : ashwathnarayanagowda@gmail.com

R. VIJAY KUMAR.
PH 080-23432244

C.K CONSTRUCTIONS

P.W.D Contractor
48/5,'C' Block, Sahakaranagar, Bangalore-560 092.

Ref

Date 6/4/2015

ರವರಿಗೆ,

ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೊಡಿಗೇಹಳ್ಳಿ ಉಪ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮಾನ್ಯರೇ,

ವಿಷಯ:- **ಕೆಲಸದ ಆದೇಶವನ್ನು ನೀಡಿರುವ ಕಾಮಗಾರಿಯನ್ನು ನಿರ್ವಹಿಸದಂತೆ ಸಾರ್ವಜನಿಕರು ತಡೆ ಹಿಡಿದಿರುವ ಬಗ್ಗೆ.**

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮ್ಮ ಅವಗಾಹನೆಗೆ ತರಬಯಸುವುದೆನೆಂದರೆ ವಾರ್ಡ್ ಸಂಖ್ಯೆ:8 ರಲ್ಲಿ ಈ ಕೆಳಕಂಡ ಕಾಮಗಾರಿಯನ್ನು 2014-15ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ-1771 ರಲ್ಲಿ ತೆಗೆದುಕೊಂಡಿದ್ದು, ನನಗೆ ಕೆಲಸವನ್ನು ನಿರ್ವಹಿಸಲು ಕೆಲಸದ ಆದೇಶವನ್ನು ನೀಡಲಾಗಿರುತ್ತದೆ. .

ಕಾಮಗಾರಿಯ ಹೆಸರು:-	:	Improvements to Roads and Drains (Poovaiah Residence) and providing CC Road at (Shivanda and Muniraju Residence) Maruthinagara Kodigehalli in Ward No.08
ಅಂದಾಜು ಮೊತ್ತ	:	ರೂ:10.00 ಲಕ್ಷಗಳು
ಕಾಮಗಾರಿಯ ಸಂಖ್ಯೆ	:	008-15-000024
ಕೆಲಸದ ಆದೇಶ ಸಂಖ್ಯೆ	:	EE/BTP/BBMP/E-TMP/315/2014-15, Date:23.02.2015
ಗುತ್ತಿಗೆದಾರರ ಹೆಸರು	:	ಶ್ರೀ.ಆರ್.ವಿಜಯಕುಮಾರ್

ಸದರಿ ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಉದ್ದೇಶಿತ ಟಾರ್ ಅಳವಡಿಸುವ ರಸ್ತೆಯಲ್ಲಿ ಸಾರ್ವಜನಿಕರು ಕಾಂಕ್ರೀಟ್ ಚರಂಡಿಯ ನಿರ್ಮಾಣದ ಹೊರತು ಟಾರನ್ನು ಅಳವಡಿಸದಂತೆ ಕೋರುತ್ತಾ, ಕೆಲಸವನ್ನು ನಿರ್ವಹಿಸಲು ಅಡ್ಡಿಪಡಿಸಿರುತ್ತಾರೆ. ಮುಂದುವರೆದು ಉದ್ದೇಶಿತ ಕಾಂಕ್ರೀಟ್ ರಸ್ತೆಯ ಸ್ಥಳವು ಖಾಸಗಿ ಸ್ಥಳವಾದ ಕಾರಣ ಅಲ್ಲಿಯೂ ಕೆಲಸವನ್ನು ನಿರ್ವಹಿಸದಂತೆ ಅಕ್ಕಪಕ್ಕದ ಮನೆಯ ನಿವಾಸಿಗಳು ವಿರೋಧ ವ್ಯಕ್ತಪಡಿಸುತ್ತಾ ತಡೆ ಮಾಡಿರುತ್ತಾರೆ. ಈಗಾಗಲೇ ನನಗೆ ನೀಡಿರುವ ಕೆಲಸದ ಅವಧಿಯಲ್ಲಿ ಹಲವಾರು ದಿನಗಳು ಕಳೆದಿರುವುದರಿಂದ ಸಾರ್ವಜನಿಕರು ಅಡ್ಡಪಡಿಸುತ್ತಿರುವ ಕಾಮಗಾರಿಯನ್ನು ನಿರ್ವಹಿಸುವುದು ಸಾಧ್ಯವಾಗಿರುವುದಿಲ್ಲ. ಸದರಿ ಮಾಹಿತಿಯನ್ನು ವಾರ್ಡ್ ಸದಸ್ಯರು ಹಾಗೂ ವಾರ್ಡ್ ಇಂಜಿನೀಯರ್ ರವರಿಗೆ ತಿಳಿಸಿರುತ್ತೇನೆ. ಕಾಲಮಿತಿಯೊಳಗೆ ಕೆಲಸವನ್ನು ನಿರ್ವಹಿಸಲು ನಾನು ಬದ್ಧನಾಗಿರುತ್ತೇನೆ. ದಯಮಾಡಿ ಸದರಿ ಸಮಸ್ಯೆಯನ್ನು ಬಗೆಹರಿಸಿ ಕೆಲಸವನ್ನು ನಿರ್ವಹಿಸಿ ಅನುಕೂಲಕರ ವಾತಾವರಣವನ್ನು ನಿರ್ಮಿಸಿಕೊಡಬೇಕೆಂದು ಕೋರುತ್ತೇನೆ. ಒಂದು ವೇಳೆ ತಡವಾದ್ದಲ್ಲಿ ತಡವಾದ ದಿನಗಳಿಗೆ ದಂಡವನ್ನು ಹಾದಿರಲು ಕೋರುತ್ತೇನೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ,

(ಆರ್.ವಿಜಯಕುಮಾರ್)

6/4/15

AEE
Kodigehalli